## ಮೊಳಕೆ ಗೇರು ತಿಂದೀರಾ?



ಗೇರು ತೋಪುಗಳಲ್ಲಿ ಮಳೆ ಬಿದ್ದ ಬಳಿಕ ಕಂಡುಬರುವ ಗೇರು ಮೊಳಕೆಗಳು ತಿನ್ನಲು ಅತ್ಯಂತ ರುಚಿಕರ. ಗೇರುಬೀಜ ಕೊಯ್ಲಿನ ಸಮಯದಲ್ಲಿ ಬೀಜ ಆಯುವವರ ಕಣ್ತಪ್ಪಿ ಉಳಿದುಕೊಂಡ ಬೀಜಗಳು ಮಳೆ ಬಿದ್ದ ಬಳಿಕ ಹೀಗೆ ಮೊಳಕೆಯೊಡೆಯುತ್ತವೆ. ಇಂಗ್ಲಿಷ್‌ನಲ್ಲಿ **Cashew Sprouts** ಎಂದು ಕರೆಸಿಕೊಳ್ಳುವ ಇದನ್ನು ಸ್ಥಳೀಯವಾಗಿ ಗೇರುಬೀಜದ ತಾಟಿ, ಗೇರುಕೂಪು, ಕೊಡಿಪ್ಪೇಲ್ ಮುಂತಾದ ಹೆಸರಿನಲ್ಲಿ ಕರೆಯುತ್ತಾರೆ. ಇದನ್ನು ಪಾಯಸ ಸೇರಿದಂತೆ ಕೆಲವು ಖಾದ್ಯಗಳ ತಯಾರಿಕೆಯಲ್ಲೂ ಬಳಸಲಾಗುತ್ತದೆ. ನೀವಿನ್ನೂ ಇದರ ರುಚಿಯನ್ನು ಸವಿಯದಿದ್ದಲ್ಲಿ ಇನ್ನೇಕೆ ತಡ? ಮಳೆಗಾಲದಲ್ಲಿ ನೀವೂ ಒಮ್ಮೆ ಗೇರುತೋಪಿಗೆ ಭೇಟಿ ನೀಡಿ!

—ಎಂ.ಎಸ್. ಶೋಭಿತ್, ಮೂಡ್ಕಣಿ



## ಸುಡುಗಾಡಿನಲ್ಲೊಂದು ಜೀವಾತ್ಮ

ಊರಾಚೆಗಿನ ರುದ್ರಭೂಮಿಯ ಬಳಸುದಾರಿಯಲ್ಲಿ ನಿರುಪಯುಕ್ತ ವಸ್ತುಗಳನ್ನು ರಾಶಿ ರಾಶಿಯಾಗಿ ಸುರಿಯಲಾಗುತ್ತದೆ. ಇಂತಿಪ್ಪ ರಾಶಿಯಲ್ಲಿ ಬಿಳಿಯ ಚೀಲವೊಂದು ಮೌನದಲಿ ಕೂಗುತ್ತಿರುವಂತೆ ಭಾಸವಾಯಿತು. ಹತ್ತಿರ ಹೋಗಿ ನೋಡಿದರೆ ಹರಿದ ಚೀಲದಲ್ಲಿ ಒರಟೊರಟಾದ ದಪ್ಪ ಕಾಂಡ ಒಣಗಿ ನಿಂತಿತ್ತು. ಆ ಕಸ ಎಸೆದವರನ್ನ ಸಂಪರ್ಕಿಸಿ ಸಸಿಯ ಪೂರ್ವ ವೃತ್ತಾಂತವನ್ನು ವಿಚಾರಿಸಿದೆ. ಕಳೆದ ವರ್ಷ ಜೂನ್ 5ರ ಪರಿಸರ ದಿನಕ್ಕೆ ಈ ಸಸಿಯನ್ನು ತಂದಿದ್ದು ಸಮಾರಂಭ ಮುಗಿದ ಮೇಲೆ ಮೂಲೆಗಿಟ್ಟಿದ್ದಾರೆ. ನೀರಿಲ್ಲದೇ ಒಣಗಿದ ಅದನ್ನು ಮುಂದೊಂದು ದಿನ ಕಸವೆಂದು ಪರಿಗಣಿಸಿ ತಿಪ್ಪೆಗೆ ಸೇರಿಸಿದ್ದರೆಂದು ತಿಳಿದು ಖೇದವಾಯಿತು.

ಅದನ್ನು ಎತ್ತಿಕೊಂಡು ಮನೆಗೆ ತಂದು ನೀರು ಹಾಕಿ ಕಾದೆ. ಕೆಲವೇ ದಿನಗಳಲ್ಲಿ ಒಣಕಡ್ಡಿಯಿಂದ ಚಿಗುರು ಮೂಡತೊಡಗಿ, ವಾರ ತುಂಬುವಷ್ಟರಲ್ಲಿ ಎಲೆಗಳು ಅರಳಿ ಮೈದುಂಬಿತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಮಡ್ ಡಾಬರ್ ಮಣ್ಣಿನ ಮಹಲು

ನಮ್ಮನೆಯ ಕೊಟ್ಟಿಗೆಯ ಅಟ್ಟಣಿಗೆಯಲ್ಲಿಟ್ಟಿದ್ದ ಹಳೇ ಸಾಮಾನುಗಳ ಧೂಳು ಹೊಡೆದು ಓರಣವಾಗಿರಿಸುವ ಎಂದು ಕೆಲಸಕ್ಕೆ ಕೈ ಹಾಕಿದಾಗ ಈ ಸೀಮೆ ಎಣ್ಣೆ ಸ್ಟೋವ್ ಸಿಕ್ಕಿತು. ಬತ್ತಿಗಳ ಸುತ್ತ ಮುಚ್ಚುವ ಕೊಳವೆಯಾಕಾರದ ರಚನೆಯ ಮೇಲ್ಭಾಗದಲ್ಲಿ ಬಲೆಯ ನಡುವೆ ಏನೋ ರಂಧ್ರವಿರುವಂತೆ ಗೋಚರಿಸಿತು. ಏನಿರಬಹುದೆಂದು ತೆರೆದು ನೋಡಿದಾಗ ಒಳ ಭಾಗದಲ್ಲಿ ಕಂಡಿದ್ದು ಈ ಮಣ್ಣಿನ ಗೂಡುಗಳು.

ಹಸಿ ಮಣ್ಣಿನಿಂದ ನಿರ್ಮಿಸಲಾದ ಈ ಗೂಡುಗಳ ಒಡೆತನ ಮಡ್ ಡಾಬರ್ (ಮಣ್ಣಿನ ಗೂಡು ಕಟ್ಟುವ ಹುಳ)ಗೆ ಸೇರಿದೆ. ಸ್ಪೆಸಿಡೆ (**sphecidae**) ಅಥವಾ ಕ್ರಾಬ್ರೊನಿಡೆ (**crabronidae**) ಕುಟುಂಬಕ್ಕೆ ಸೇರಿದ ಈ ಜಾತಿಯ ಹುಳುಗಳಲ್ಲಿ ಸಾಕಷ್ಟು ವಿಧಗಳಿವೆ . ಹೆಣ್ಣು ಹುಳ ಈ ರೀತಿ ಮಣ್ಣಿನ ಗೂಡು ಕಟ್ಟಿ ಮೊಟ್ಟೆ ಇಟ್ಟು, ಅದನ್ನು ಮಣ್ಣಿನಿಂದ ಮುಚ್ಚಿ ಬಿಡುವುದು. ನಿರ್ದಿಷ್ಟ ಅವಧಿಯಲ್ಲಿ ಮೊಟ್ಟೆಯಿಂದ ಹೊರಬರುವ ಮರಿಗಳಿಗೆ ಅಲ್ಲೇ ಆಹಾರ ವ್ಯವಸ್ಥೆಯನ್ನು ಮಾಡಿಡುವುದು ವಿಶೇಷ.

—ಎಸ್.ಎನ್. ಚಂದ್ರಕಲಾ ಕೊಪ್ಪ

